# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ಸಂ:ಬಿಬಿಎಂಪಿ/ಸಕಾಅ/ಹೂಉವಿ/43/2020-21

ದಿನಾಂಕ:11.03.2022

**-:ದಿನಾಂಕ:11.03.2022 ರಂದು ನಡೆದ 54-ಹೂಡಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ11.03.2022 ರ ಶುಕ್ರವಾರ ಮಧ್ಯಾಹ್ನ 3.00 ಕ್ಕೆ ವಾರ್ಡ್ ನಂ.54-ಹೂಡಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:-**

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀ.ಕುಬೇರಪ್ಪ. ಕೆ | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು ಹಾಗೂ ಸ.ಕಾ.ಅ. ಹೂಡಿ ಉಪವಿಭಾಗ | ಹಾಜರಿದ್ದರು. |
| 2. | ಶ್ರೀ.ಶೇಖ್ ಮೊಹಿದ್ದೀನ್ | ಕಾರ್ಯದರ್ಶಿಗಳು ವಾರ್ಡ್ ಎ.ಇ. ವಾರ್ಡ್.ನಂ-54 | ಹಾಜರಿದ್ದರು. |
| 3 | ಶ್ರೀ.ನಾಗರಾಜ.ವಿ | ಹಿರಿಯ ಆರೋಗ್ಯ ಪರಿವೀಕ್ಷಕರು, | ಹಾಜರಿದ್ದರು. |
| 4 | ಶ್ರೀ.ವೀರಪ್ಪ | ಕಿರಿಯ ಆರೋಗ್ಯ ನೀರಿಕ್ಷಕರು, | ಹಾಜರಿದ್ದರು. |
| 5 | ಶ್ರೀ.ಚಂದ್ರಪ್ಪ | ಕಿರಿಯ ಆರೋಗ್ಯ ನೀರಿಕ್ಷಕರು ಭೈರತಿ ಹೂಡಿ-54 | ಹಾಜರಿದ್ದರು. |
| 6 | ಶ್ರೀ.ಶಿವರಾಜ್.ಡಿ,ಬಿ | Street Light | ಹಾಜರಿದ್ದರು. |
| 7. | ಶ್ರೀ.ಟಿ.ಆರ್ ಸತೀಶ್ | ಅಯ್ಯಪ್ಪನಗರ | ಹಾಜರಿದ್ದರು. |
| 8. | ಅಶೋಕ್.ಬಿ.ಕೆ | ಆರ್ ಐ ಮೇಜರ್ ರೋಡ್ | ಹಾಜರಿದ್ದರು. |
| 9. | ಎಸ್.ಎಂ.ಜಯಶಂಕರ್ | ಎ ಎಸ್ ಐ | ಹಾಜರಿದ್ದರು. |
| 10. | ಸಂಗಪ್ಪ .ಕೆ | ಪಿಸಿ-12495 | ಹಾಜರಿದ್ದರು. |
| 11. | ಹರ್ಷ.ಎಸ್ | ಪೋಲೀಸ್ ಸಬ್ ಇನ್ಸಪ್ಟೇರ್ ಮಹದೇವಪುರ | ಹಾಜರಿದ್ದರು. |
| 12. | ನಾರಾಯಣಸ್ವಾಮಿ.ಎಂ | ಎ ಎಸ್ ಐ ಕೆ.ಆರ್.ಪುರಂ | ಹಾಜರಿದ್ದರು. |
| 13. | ಹರೀಶ.ಡಿ.ಜಿ | ಮಹದೇವಪುರ ಪೋಲೀಸ್ | ಹಾಜರಿದ್ದರು. |
| 14. | ಶ್ರೀ.ಆರೋಗ್ಯಸ್ವಾಮಿ | ಆರ್.ಡಬ್ಲ್ಯೂ.ಎ. ಭೈರತಿ | ಹಾಜರಿದ್ದರು. |
| 15. | ಶ್ರೀ.ಸಿ.ಪಿ ಪಾಟೀಲ್ | ಸಾರ್ವಜನಿಕರು | ಹಾಜರಿದ್ದರು. |

Scanned with CamScanner

| | | | |
|---|---|---|---|
| 16. | ಶ್ರೀಮತಿ.ಅರುಣಾರೆಡ್ಡಿ | ಹೂಡಿ | ಹಾಜರಿದ್ದರು. |
| 17. | ಶ್ರೀ.ಮಹೇಂದ್ರ ಪ್ರಸಾದ್ | ಕೊಡಿಗೇಹಳ್ಳಿ | ಹಾಜರಿದ್ದರು. |
| 18. | ಶ್ರೀಮತಿ.ಅನಿತಾ | SWM Sup. | ಹಾಜರಿದ್ದರು. |
| 19. | ನರಸಮ್ಮ (ನಳಿನಿ) | SWM Sup. | ಹಾಜರಿದ್ದರು. |
| 20. | ಶಂಕರ್ ಮೂರ್ತಿ | | ಹಾಜರಿದ್ದರು. |
| 21. | ರವಿಕುಮಾರ್ | ಜೆ ಇ, ಬಿಡಬ್ಲ್ಯೂಎಸ್‌ಎಸ್ ಬಿ, ಎಇಇ-1-1 | ಹಾಜರಿದ್ದರು. |
| 22. | ಪುಟ್ಟಪ್ಪ.ಜಿ.ಜಿ | ಹೂಡಿ ಸಿ.ಆರ್.ಪಿ (ಬಿಇಓ ಆಫೀಸ್ ಕೆ.ಆರ್.ಪುರಂ) | ಹಾಜರಿದ್ದರು. |
| 23. | ನಾರಾಯಣಸ್ವಾಮಿ | ಸಾರ್ವಜನಿಕರು | ಹಾಜರಿದ್ದರು. |

**ಸಭೆಯ ನಡುವಳಿಗಳು:-**

- ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ–54 ರವರು ಸಭೆಗೆ ಬಂದಿರುವ ವಾರ್ಡ್ ಸದಸ್ಯರಿಗೆ, ಅಧಿಕಾರಿ/ನೌಕರರುಗಳಿಗೆ ಸ್ವಾಗತಾ ಕೋರಿಸಭೆ ನಡೆಸಿಕೊಡುವಂತೆ ಕೋರಿದರು.
- ಅಧ್ಯಕ್ಷರು ಈ ಹಿಂದೆ ನಡೆದ ವಾರ್ಡ್ ಸಮಿತಿ ಸಭೆಯಲ್ಲಿ ತಿರ್ಮಾನಗಳನ್ನು ಕೈಗೊಂಡಿರುವ ಬಗ್ಗೆ ಅಧಿಕಾರಿ/ನೌಕರರು ಚರ್ಚಿಸಲಾಯಿತ್ತು ಹಾಗೂ ಕ್ರಮವಹಿಸಲು ಸೂಚಿಸಲಾಯಿತ್ತು.
- ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು ಹಾಗೂ ಮುಂದಿನ ಸಭೆಯಲ್ಲಿ ಗೈರುಹಾಜರಾದಲ್ಲಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದು ಎಂದು ತಿಳಿಸಿದರು.

**ಪೋಲೀಸ್ ಇಲಾಖೆ**

1) ಪ್ರಸಾದ್ ಕೊಡಿಗೇಹಳ್ಳಿ ರವರು ಲುಲೂಸ್ ಬೇಕರಿ ಅಯ್ಯಪ್ಪನಗರಯಿಂದ ಕೊಡಿಗೇಹಳ್ಳಿ ರಸ್ತೆಯಲ್ಲಿ ಹೆಚ್ಚಿನ ಟ್ರಾಫಿಕ್ ಸಮಸ್ಯೆಯಿರುವ ಬಗ್ಗೆ ತಿಳಿಸಿರುತ್ತಾರೆ.
2) ಎ ಎಸ್ ಐ ಟ್ರಾಫಿಕ್ ರವರು ತಾತ್ಕಾಲಿಕವಾಗಿ ಟ್ರಾಫಿಕ್ ಆಗದಂತೆ ಈಗಾಗಲೇ 4 ಜನ ಸ್ಟಾಫ್‌ಗಳನ್ನು ನಿಯೋಜಿಸಿ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆಂದು ತಿಳಿಸಿದರು.
3) ಹೂಡಿ ಮುಖ್ಯರಸ್ತೆಯಲ್ಲಿ ಬೀದಿಬದಿ ವ್ಯಾಪಾರಿಗಳಿಂದ ಟ್ರಾಫಿಕ್‌ಗೆ ತೊಂದರೆಯಾಗುತ್ತದೆಂದು ತಿಳಿಸಿರುತ್ತಾರೆ.
4) ಪಾಟೀಲ್ ಅಯ್ಯಪ್ಪನಗರ ರವರು ಅಯ್ಯಪ್ಪನಗರ ವ್ಯಾಪ್ತಿಯಲ್ಲಿ ಕಳ್ಳತನಗಳು ಹೆಚ್ಚಾಗಿರುತ್ತವೆ ಹಾಗೂ ಎಫ್.ಐ.ಆರ್ ಮಾಡಲು ನಿರಾಕರಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.
5) ಅಧ್ಯಕ್ಷರು ಈ ವಿಷಯವಾಗಿ ಮೇಲಾಧಿಕಾರಿಗಳ ಗಮನಕ್ಕೆ ತರಲು ಹಾಜರಿಂದ್ದ ಪೋಲೀಸ್ ಇಲಾಖೆಯವರಿಗೆ ತಿಳಿಸಿದರು ಹಾಗೂ ಪೋಲೀಸ್ ಇಲಾಖೆಯ ಬೀಟ್ ವ್ಯವಸ್ಥೆ ಹೆಚ್ಚಿಸಲು ಸೂಚಿಸಿರುತ್ತಾರೆ.
6) ನಳಿನಿ ಹೂಡಿರವರು ರೈಲ್ವೆ ರಸ್ತೆಯ ಪಕ್ಕದಲ್ಲಿ ಚಿಕ್ಕ ವಯಸ್ಸಿನ ಮಕ್ಕಳು ಕುಡಿದು ಗಲಾಟೆಗಳನ್ನು ಮಾಡುತ್ತಿರುತ್ತಾರೆಂದು ತಿಳಿಸಿರುತ್ತಾರೆ.
7) ಪೋಲೀಸ್ ಇಲಾಖೆಯವರು ಇಲಾಖೆಯಿಂದ ಕಂಟ್ರೋಲ್ ರೂಮ್ ಟ್ರೂಲ್ ನಂಬರ್‌ಗೆ ತಕ್ಷಣ ಕರೆ ಮಾಡಲು ತಿಳಿಸಿದರು. ಅಥವಾ ಸಂಬಂಧಿಸಿದವರಿಗೆ ಕರೆಮಾಡಲು ತಿಳಿಸಿದರು.

Scanned with CamScanner

8) ರಾಜೇಶ್ ಹೂಡಿರವರು ಎಲ್ಲಾ ಶಾಲಾ ಗ್ರೌಂಡ್‌ಗಳಲ್ಲಿ ವಯಸ್ಕರ ಹೂಡುಗರು ದಾಂಡಲೆ ನಡೆಸುತ್ತಿರುತ್ತಾರೆ ಆದ್ದರಿಂದ ಬೆಳಗ್ಗೆ ಒಂದು ಬೀಟ್ ಮಾಡಲು ಕೋರಿರುತ್ತಾರೆ.

9) ಆರೋಗ್ಯಸ್ವಾಮಿ ಭೈರತಿ ರವರು ಭೈರತಿ-ಗೆದ್ದಲಹಳ್ಳಿ ರಸ್ತೆಯಲ್ಲಿ ಹಂಪ್‌ಗಳನ್ನು ಹಾಕಲು ಕೋರಿರುತ್ತಾರೆ .

**ಕ್ರಂ.ಸಂ 1 ಮತ್ತು 9 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಟ್ರಾಫಿಕ್/ಪೋಲೀಸ್ ಇಲಾಖೆ)**

**<u>ಶಾಲೆಯ ನಿರ್ವಹಣೆ</u>**

1) ಪ್ರಸಾದ್ ಸರ್ಕಾರಿ ಶಾಲೆಗಳ ಹತ್ತಿರ ಸುತ್ತಮುತ್ತಲು ತಂಬಾಕು ಹಾಗೂ ಇನ್ನಿತರೆ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿರುತ್ತಾರೆ ಇದನ್ನು ತೆರವುಗೊಳಿಸಲು ತಿಳಿಸಿದರು.
2) ಪಾಟೀಲ್ ಅಯ್ಯಪ್ಪನಗರ ರವರು ಆರ್‌ಟಿಇ ಬಗ್ಗೆ ತಿಳಿಸಲು ಕೋರಿರುತ್ತಾರೆ.
3) ಪುಟ್ಟಪ್ಪ ಸಾರ್ ಶಿಕ್ಷಕರು ರವರು ಸರ್ಕಾರಿ ಶಾಲೆಗಳು 1 ಕಿ.ಮಿ ಸುತ್ತಮುತ್ತಲು ಶಾಲೆಗಳಿಲ್ಲದಿದ್ದರೆ ಖಾಸಗಿ ಶಾಲೆಗಳಲ್ಲಿ ವ್ಯವಸ್ಥೆ ಮಾಡಿರುತ್ತಾರೆ.
4) ಆರೋಗ್ಯಸ್ವಾಮಿ ರವರು ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳು ಇರುವುದಿಲ್ಲ ಎಂದು ತಿಳಿಸಿದರು.
5) ಪುಟ್ಟಪ್ಪ ಸಾರ್ ಶಿಕ್ಷಕರು ರವರು ಈ ವಿಚಾರವನ್ನು ಬಿಇಓ ರವರ ಜೊತೆ ಮಾತನಾಡಿ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

**ಕ್ರಂ.ಸಂ 1 ಮತ್ತು 5ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಬಿ.ಇ.ಓ)**

**<u>I.ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-</u>**

1) ಸಿ ಪಿ ಪಾಟೀಲ್ ಆರ್.ಡಬ್ಲ್ಯೂ.ಎ. ರವರು 4ನೇ ಬ್ಲಾಕ್ ಗಂಗೊತ್ರಿ ಲೇಔಟ್ ಹತ್ತಿರ ಬ್ಲಾಕ್ ಸ್ಪಾಟ್ ಬ್ಯೂಟಿಪಿಕೇಷನ್ ಮಾಡಲು ತಿಳಿಸಿದರು ಹಾಗೂ ಸ್ವಚ್ಚಗೊಳಿಸಲು ತಿಳಿಸಿದರು.
2) ಪ್ರಸಾದ್ ರವರು ಕೊಡಿಗೇಹಳ್ಳಿ ಮುಖ್ಯರಸ್ತೆಯಲ್ಲಿ ಕಾಟೇರಮ್ಮ ದೇವಸ್ಥಾನ ರಸ್ತೆಯಲ್ಲಿ ಬ್ಲಾಕ್ ಸ್ಪಾಟ್‌ಗಳು ಹೆಚ್ಚಾಗಿರುತ್ತದೆ ಎಂದು ತಿಳಿಸಿದರು.
3) ಆರೋಗ್ಯ ಸ್ವಾಮಿ ರವರು ಗೆದ್ದಲಹಳ್ಳಿ ರಸ್ತೆ ವಾಟರ್ ಡ್ರೈನ್ ಪಕ್ಕದಲ್ಲಿ ಬ್ಲಾಕ್‌ಸ್ಪಾಟ್‌ಗಳು ಇರುತ್ತದೆಂದು ತಿಳಿಸಿದರು.
4) ರಾಜೇಶ್ ರವರು ತಿಗಳರಪಾಳ್ಯ ವಾಟರ್ ಪ್ಲಾಂಟ್ ಹತ್ತಿರ ಕಸಹಾಕುತ್ತಿರುತ್ತಾರೆ ಎಂದು ತಿಳಿಸಿದರು.

**ಕ್ರಂ.ಸಂ 1 ಮತ್ತು 4ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಎಸ್.ಡಬ್ಲ್ಯೂ.ಎಂ/ಹಿ.ಆ.ಪ/ಕಿ.ಆ.ಪ)**

Scanned with CamScanner

**ಬಿ.ಡಬ್ಲ್ಯೂ.ಎಸ್.ಎಸ್.ಬಿ(BWSSB):-**

1) ಮಂಜುನಾಥ ಹೂಡಿ ರವರು ಕೊಡಿಗೇಹಳ್ಳಿ ಮುಖ್ಯರಸ್ತೆಯಲ್ಲಿ ರಸ್ತೆಯಲ್ಲಿ ಬಿಡಬ್ಲ್ಯೂಎಸ್ಎಸ್‌ಬಿ ರವರು ಕಾರ್ಯನಿರ್ವಹಿಸುವ ಅಂದರೆ ಲಖದ ಕೆಲ ತಿಂಗಳ ಹಿಂದೆ ಲೈನ್ ಬದಲಿಸುವ ವೇಳೆ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ, ರಸ್ತೆಯಲ್ಲಿ ರೀ ಸ್ಟೋರ್ ಸರಿಯಾಗಿ ಮಾಡಿಲ್ಲದ ಕಾರಣ ರಸ್ತೆಯಲ್ಲಿ ಗುಂಡಿಗಳು ಬಿದ್ದಿರುತ್ತದೆ ಇಂತಹ ಕೆಲಸಗಳು ಮರುಗಳಿಸದಂತೆ ನೋಡಿಕೊಳ್ಳಲು ಕೋರಿರುತ್ತಾರೆ.
2) ಪ್ರಸಾದ್ ಆರ್.ಡಬ್ಲ್ಯೂ.ಎ. ರವರು ಕೊಡಿಗೇಹಳ್ಳಿ ಅಲ್ಫಾಗಾರ್ಡನ್ ಹಾಗೂ ಕೊಡಿಗೇಹಳ್ಳಿ ಮುಖ್ಯರಸ್ತೆಯಲ್ಲಿ ಹಲವಾರು ಗುಂಡಿಗಳು ಬಿದ್ದಿರುತ್ತದೆ ಎಂದು ತಿಳಿಸಿದರು.
3) ಆರೋಗ್ಯಸ್ವಾಮಿ ರವರು ತೆರೆಸಾ ಪಬ್ಲಿಕ್ ಶಾಲೆ ರಸ್ತೆಯಲ್ಲಿ ಮ್ಯಾನ್‌ಹೋಲ್ ಉಕ್ಕಿ ಹರಿಯುತ್ತದೆ ಎಂದು ತಿಳಿಸಿದರು.
4) ಪಾಟೀಲ್, ಸತೀಶ್, ಮಂಜುನಾಥ ರವರು ಕುಡಿಯುವ ನೀರಿನ ಸಮಸ್ಯೆಹೆಚ್ಚಾಗಿರುತ್ತದೆ ಎಂದು ತಿಳಿಸಿದರು.
5) ಮಂಜುನಾಥ ಹೂಡಿ ರವರು ತಿಗಳರಪಾಳ್ಯ ವ್ಯಾಪ್ತಿಯಲ್ಲಿ ಮುಖ್ಯವಾಗಿ ಪಿಜಿಗಳಿಗೆ ನೀರು ಒದಗಿಸುತ್ತಿರುತ್ತಾರೆ ಇವರಿಗೆ ಮೀಟರ್ ಅಳವಡಿಕೆ ಅಥವಾ ಡಿಸ್‌ಕೌಂಟ್ ಮಾಡಿ ಎಂದು ತಿಳಿಸಿದರು.
6) ಸತೀಶ್ ಅಯ್ಯಪ್ಪನಗರ ರವರು ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿರುತ್ತದೆ ಎಂದು ತಿಳಿಸಿದರು.
7) ಹೂಡಿ ಮಸೀದಿ ರಸ್ತೆಯಲ್ಲಿ ಆರು ಛೇಂಬರ್‌ಗಳು ಡ್ಯಾಮೇಜ್ ಹಾಗಿದ್ದು ಸರಿಪಡಿಸಲು ತಿಳಿಸಿದರು.
8) ಆರೋಗ್ಯಸ್ವಾಮಿ ರವರು ಗೆದ್ದಲಹಳ್ಳಿ ರಸ್ತೆಯಲ್ಲಿ ಹಳೆ ಪೈಪ್ ಲೈನ್‌ನಲ್ಲಿ ಲೀಕೆಜ್‌ಇದ್ದು ಸರಿ ಪಡಿಸಲು ತಿಳಿಸಿದರು.

**ಕ್ರಂ.ಸಂ 1ರಿಂದ 8 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸ.ಕಾ.ಅ./ಸ.ಅ/ಬಿ.ಡಬ್ಲ್ಯೂ.ಎಸ್,ಎಸ್.ಬಿ).**

**ಕಾಮಗಾರಿ ಇಲಾಖೆ**

1) ಪ್ರಸಾದ್ ರವರು 40 ಹಾಗೂ ಅದಕ್ಕಿಂತ ಹೆಚ್ಚಾಗಿ ಇರುವ ಅಪಾರ್ಟ್‌ಮೆಂಟ್‌ಗಳಿಗೆ ಎಸ್ ಟಿ ಪಿ ಮಾಡದಿರುವ ಅಪಾರ್ಟ್‌ಮೆಂಟ್‌ಗಳಿಗೆ ಖಾತಾವನ್ನು ವಿತರಿಸಬಾರದೆಂದು ತಿಳಿಸಿದರು.
2) ಪ್ರಸಾದ್ ಕೊಡಿಗೇಹಳ್ಳಿ ರವರು ಹೊಸದಾಗಿ ಕಾಮಗಾರಿಗಳು ನಡೆದಿರುವ ಜಾಗದಲ್ಲಿ ಡೆಬ್ರಿಸ್ ಹಾಗೂ ಮಣ್ಣಿನ ರಾಶಿಗಳಿದ್ದು ಇವುಗಳನ್ನು ತೆಗೆಯಲು ತಿಳಿಸಿದರು.
3) ಹೂಡಿ ಗ್ರಾಮದ ಮಸೀದಿ ರಸ್ತೆಯನ್ನು ಅಗೆದು ಕಾಮಗಾರಿ ಅರ್ಧಕ್ಕೆ ನಿಂತಿರುತ್ತದೆ ಇದನ್ನು ಪೂರ್ಣಗೊಳಿಸಲು ತಿಳಿಸಿದರು.

4) ಈ ವಿಷಯವಾಗಿ ಅಧ್ಯಕ್ಷರು ಮೇಜರ್ ರೋಡ್ ರವರಿಗೆ ಈ ವಿಷಯವಾಗಿ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

**ಕ್ರಂ.ಸಂ 1ರಿಂದ 4 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
***(ಕಮ:- ಸಕಾಅ/ಸಅ/ಬಿಬಿಎಂಪಿ/ಮೇಜರ್ ರೋಡ್)***

Scanned with CamScanner

**ಬೀದಿ ದೀಪ ಹಾಗೂ ಬೆಸ್ಕಾಂ**

1) ಹೂಡಿ ಸ್ಮಶಾನದಲ್ಲಿ ಲೈಟ್ ಬರುತ್ತಿಲ್ಲವೆಂದು ರಾಜೇಶ್ ದೂರು ನೀಡಿರುತ್ತಾರೆ.
2) ಅಧ್ಯಕ್ಷರು ಅದರಂತೆ ಸಂಬಂಧಪಟ್ಟ ಅಧಿಕಾರಿಯವರಿಗೆ ಸೂಚಿಸಿದರು.
3) ಆರೋಗ್ಯಸ್ವಾಮಿ ರವರು ಭೈರತಿ ಭಾಗದಲ್ಲಿ ಯಾವುದೇ ಲೈಟ್‌ಗಳು ಇರುವುದಿಲ್ಲ ಎಂದು ತಿಳಿಸಿದರು.
4) ಹೂಡಿ ಮಂಜುನಾಥರವರು ಬೀದಿ ದೀಪ ಕಂಬದಲ್ಲಿ ಲೈಟ್‌ಗಳು ಸರಿಯಾಗಿ ಇರುವುದಿಲ್ಲ ಹಾಗೂ ಲೈಟ್‌ಗಳು ಕಳ್ಳವುಯಾಗುತ್ತದೆ ಅದನ್ನು ನೋಡಿಕೊಳ್ಳಬೇಕೆಂದು ಸೂಚಿಸಿದರು.
5) ಬೆಸ್ಕಾಂಗೆ ಸಂಬಂಧಿಸಿದಂತೆ ಹಲವಾರು ದೂರುಗಳು ಬಂದಿರುತ್ತದೆ
6) ಆದ್ದರಿಂದ ಬೆಸ್ಕಾಂ ಅಧಿಕಾರಿಗಳು ಕಡ್ಡಾಯವಾಗಿ ಮುಂದಿನ ಸಭೆಗೆ ಹಾಜರಾಗಲು ಅಧ್ಯಕ್ಷರು ಸೂಚಿಸಿರುತ್ತಾರೆ.

**ಕ್ರಂ.ಸಂ 1ರಿಂದ 6 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸ.ಕಾ.ಅ./ಸ.ಅ/ಬೆಸ್ಕಾಂ)**

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

ಮುಂಜಾಗ್ರತಾ ಕ್ರಮವಾಗಿ ಸಭೆ ಸಮಾರಂಬ ಮಾಡದಂತೆ ತಿಳಿಸಲಾಯಿತ್ತು ಹಾಗೂ ವ್ಯಾಕ್ಸಿನ್‌ನೇಶನ್ ಹಾಕಿಸಲು ಸ್ಥಳಿಯರಿಗೆ ಮುಂಜಾಗ್ರತೆ ವಹಿಸಿ ಕ್ರಮಕೈಗೊಳ್ಳಲು ತಿಳಿಸಿದರು.

Covid-19, ವ್ಯಾಕ್ಸಿನೇಷನ್, Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ನೋಡಲ್ ಅಧಿಕಾರಿ ಹಾಗೂ
ಸ.ಕಾ.ಅ. ಹೂಡಿ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-54 ಹೂಡಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ

Scanned with CamScanner